ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಸದ್ಯಕ್ಕೆ ಸಕಲೇಶಪುರ ಪಟ್ಟಣದಲ್ಲಿ ಕುಡಿಯುವ ನೀರಿನ ಬಗ್ಗೆ ಅಭಾವವಿರುವುದಿಲ್ಲ. ಪಟ್ಟಣದ ಹೆಚ್ಚಿನ ಭಾಗಕ್ಕೆ ಹೇಮಾವತಿ ನದಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಬೇಸಿಗೆ ಕಾಲದಲ್ಲಿ ಹೇಮಾವತಿ ನದಿಯಲ್ಲಿ ಕಡಿಮೆ ನೀರು ಹರಿಯುವಾಗಲೂ ಸಹ ಮರಳು ಮೂಟೆಯನ್ನು ಶೇಖರಿಸಿ ನದಿಗೆ ಅಡ್ಡಲಾಗಿ ಬಂಡ್ ಕಟ್ಟಿ ಕಟ್ಟಿ ನೀರನ್ನು ಸಂಗ್ರಹಿಸಿ ನೀರು ಸರಬರಾಜು ಮಾಡಲಾಗುತ್ತಿದೆ. ಆದರೂ ಕೆಲವು ವೇಳೆ ನೀರು ಕಡಿಮೆ ಹರಿಯುತ್ತಿರುವಾಗ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ಕಷ್ಟವಾಗುತ್ತದೆ.

ಆ) ೧) ಸಕಲೇಶಪುರ ಪಟ್ಟಣ ಕುಶಾಲನಗರ ಬಡಾವಣೆಗೆ ಕುಡಿಯುವ ನೀರು ಪೂರೈಸಲು ಒಂದು ರಿಂಗ್‌ಬಾವಿ ತೋಡಿ ಅದಕ್ಕೆ ಮೋಟಾರು ಪೈಪ್‌ನ್ನು ಅಳವಡಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಹಾಸನ ಇವರಿಗೆ ಪ್ರಸ್ತಾವನೆ ಸಲ್ಲಿಸಿದೆ.

೨) ಅಚಂಗಿ ಮತ್ತು ಬಸವನಹಳ್ಳಿ ಬಡಾವಣೆಗಳಿಗೆ ಪುರಸಭೆ ವತಿಯಿಂದ ಮತ್ತು ೧೦ನೇ ಹಣಕಾಸು ಆಯೋಗದಿಂದ ಈ ಬಡಾವಣೆಗಳಿಗೆ ನೀರು ಪೂರೈಸಲು ನೆಲ ಮಟ್ಟದ ಎರಡು ತೊಟ್ಟಿಯನ್ನು ನಿರ್ಮಿಸಲಾಗಿದೆ.

೩) ಸಕಲೇಶಪುರ ಪುರಸಭೆ ವತಿಯಿಂದ ಅಚಂಗಿ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೋಗಲಾಡಿಸಲು ಪುರಸಭೆ ವತಿಯಿಂದ ಒಂದು ರಿಂಗ್ ಬಾವಿಯನ್ನು ತೋಡಲಾಗಿದೆ.

೪) ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ರವರಿಗೆ ಸಕಲೇಶಪುರ ಪಟ್ಟಣಕ್ಕೆ ಕನಿಷ್ಟ ಆರು ಕೊಳವೆ ಬಾವಿಯನ್ನು ಕೊರೆಸಿಕೊಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಹಾಸ್ಟೆಲ್ ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚ.

2432(3091)

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ಒಬ್ಬ ವಿದ್ಯಾರ್ಥಿಗೆ ಖರ್ಚು ಮಾಡುತ್ತಿರುವ ನಿರ್ವಹಣಾ ವೆಚ್ಚ ಎಷ್ಟು?

ಆ) ಈ ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚವನ್ನು ಹೆಚ್ಚು ಮಾಡುವ ಅಗತ್ಯತೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಯಾವ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು. ಯಾವಾಗ ಹೆಚ್ಚಿಸಲಾಗುವುದು? (ವಿವರಗಳನ್ನು ನೀಡುವುದು).

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿರುವ ಪ್ರತಿ ವಿದ್ಯಾರ್ಥಿಗೆ ಭೋಜನಕ್ಕಾಗಿ 350.00 ರೂ.ಗಳನ್ನು ಮತ್ತು ಇತರೆ ವೆಚ್ಚಕ್ಕಾಗಿ 25.00 ರೂ.ಗಳನ್ನು ಪ್ರತಿ ತಿಂಗಳು ನೀಡಲಾಗುತ್ತಿದೆ. ಇದಲ್ಲದೆ ವಾರ್ಷಿಕ 300.00 ರೂ.ಗಳನ್ನು ಸಮವಸ್ತ್ರಕ್ಕೂ 100.00ಗಳನ್ನು ಪಠ್ಯ ಪುಸ್ತಕಕ್ಕೂ ಮತ್ತು 30.00 ರೂ.ಗಳನ್ನು ಕ್ಷೌರಕ್ಕೂ ವೆಚ್ಚ ಮಾಡಲಾಗುತ್ತಿದೆ. ಇದಲ್ಲದೆ, 3 ವರ್ಷಕ್ಕೊಮ್ಮೆ 300.00 ರೂ.ಗಳ ವೆಚ್ಚದಲ್ಲಿ ಹಾಸಿಗೆ ಮತ್ತು ಹೊದಿಕೆಗಳನ್ನು ಒದಗಿಸಲಾಗುತ್ತಿದೆ. ಹೀಗೆ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ 4280.00 ರೂ.ಗಳನ್ನು ನಿರ್ವಹಣೆಗಾಗಿ ವೆಚ್ಚ ಮಾಡಲಾಗುತ್ತಿದ್ದು ಇದು ಪ್ರತಿ ತಿಂಗಳಿಗೆ 356.67 ರೂ.ಗಳಾಗಿರುತ್ತದೆ. ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಊಟದ ವೆಚ್ಚಕ್ಕಾಗಿ ಮಾಹೆಯಾನ 400.00 ರೂ.ಗಳ ವೆಚ್ಚ ಮಾಡಲಾಗುತ್ತಿದೆ.

ಆ) ಹೌದು.

ಇ) ಊಟದ ವೆಚ್ಚವನ್ನು ಹೆಚ್ಚಿಸುವ ವಿಷಯವನ್ನು ಪ್ರಸಕ್ತ ಸಾಲಿನಲ್ಲಿ ಪರಿಶೀಲಿಸಲಾಗುವುದು.

ರಾಜ್ಯದ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ನಿರ್ವಹಣಾ ವೆಚ್ಚ.

2433(3092)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?